ಅ) ಉಡುಪಿ ತಾಲ್ಲೂಕಿನ ಬ್ರಹ್ಮಾವರದಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಉಪ ವಿಭಾಗವನ್ನು ಪ್ರಾರಂಭಿಸಿ ಎಷ್ಟು ವರ್ಷಗಳಾದವು?

ಆ) ಅಲ್ಲಿ ಉಗ್ರಾಣವನ್ನು ತೆರೆಯಲು ಸರ್ಕಾರದವರು ಪರಿಶೀಲಿಸುವರೇ?

ಇ) ಹಾಗಿದ್ದಲ್ಲಿ ಉಗ್ರಾಣವನ್ನು ಎಂದಿನಿಂದ ಪ್ರಾರಂಭಿಸಲಾಗುವುದು?

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) ಎರಡು ವರ್ಷಗಳು

ಆ) ಪರಿಶೀಲನೆಯಲ್ಲಿದೆ

ಇ) ಸದರಿ ಉಗ್ರಾಣವನ್ನು ತೆರೆಯಲು ಬೇಕಾಗಿರುವ ಅಂಕಿ ಅಂಶ ಮತ್ತು ಮಾಹಿತಿಗಳನ್ನು ಸಂಗ್ರಹಿಸಲಾಗಿದ್ದು, ತದನಂತರ ತೀರ್ಮಾನವನ್ನು ತೆಗೆದುಕೊಳ್ಳಲಾಗುವುದು.

ಮಲ್ಪೆ ಬೀಚ್ ರಿಸಾರ್ಟ್ಸ್ ಯೋಜನೆಗೆ ಮಂಜೂರಾತಿ

343-ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ತಾಲ್ಲೂಕಿನ ಮಲ್ಪೆ ಬೀಚ್ ರಿಸಾರ್ಟ್ಸ್ ಯೋಜನೆಗೆ ಸರ್ಕಾರದವರು ಯಾವಾಗ ಮಂಜೂರಾತಿ ನೀಡಿದ್ದಾರೆ?

ಆ) ಈ ಯೋಜನೆಗೆ ಮಂಜೂರಾದ ಹಣವೆಷ್ಟು? ಹಾಗೂ ಈವರೆಗೆ ಖರ್ಚಾಗಿರುವ ಹಣವೆಷ್ಟು?

ಇ) ಈ ಯೋಜನೆ ಕೆಲಸ ಕಾರ್ಯ ಈಗ ಯಾವ ಹಂತದಲ್ಲಿದೆ?

ಈ) ಈ ಯೋಜನೆಯನ್ನು ಖಾಸಗಿಯವರಿಗೆ ವಹಿಸುವ ಆಲೋಚನೆ ಸರ್ಕಾರದವರ ಪರಿಶೀಲನೆಯಲ್ಲಿದೆಯೇ?

ಉ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆಯಡಿಯಲ್ಲಿ ಮಲ್ಪೆಯಲ್ಲಿ ಬೀಚ್ ರಿಸಾರ್ಟ್ಸ್ ಯೋಜನೆಯನ್ನು 1979ರಲ್ಲಿ ಆರಂಭಿಸಲಾಯಿತು.

ಆ) ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆಯಡಿಯಲ್ಲಿ ಮಲ್ಪೆ, ಮಡಿಕೇರಿ ಹಾಗೂ ಇತರ ಯೋಜನೆಗಳಿಗೆ ಸೇರಿ ಒಟ್ಟು ರೂ. 109.96 ಲಕ್ಷಗಳ ಅನುದಾನ ನೀಡಲಾಗಿದೆ. ಅದಾಗ್ಯೂ, ಮಲ್ಪೆ ಬೀಚ್ ರಿಸಾರ್ಟ್ಸ್ ಯೋಜನೆಗೆ ಮಾತ್ರ ದಿನಾಂಕ 31-3-95ರ ವರೆಗೆ ಒಟ್ಟು 138.13 ಲಕ್ಷ ಖರ್ಚಾಗಿರುತ್ತದೆ.

ಇ) ಈ ಯೋಜನೆಯ ಕಾರ್ಯವನ್ನು 1986 ಆಗಸ್ಟ್ ತಿಂಗಳಲ್ಲಿ ನಿಲ್ಲಿಸಲಾಯಿತು. ಬೀಚ್ ರೆಸಾರ್ಟ್ಸ್ ಕಟ್ಟಡ ನಿರ್ಮಾಣದ ಕಾರ್ಯ ಅಪೂರ್ಣಗೊಂಡಿದೆ.

ಈ) ಹೌದು.

ಉ) ಸರ್ಕಾರದ ಅನುಮತಿಯಂತೆ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮವು, ಈ ಸ್ವತ್ತನ್ನು ಯಥಾಸ್ಥಿತಿಯ ಆಧಾರದ ಮೇಲೆ ಮಾರಾಟ ಮಾಡುವುದಕ್ಕೆ ಖಾಸಗಿಯವರಿಂದ ಟೆಂಡರ್‌ಗಳನ್ನು ಕರೆಯಲಾಗಿ, ಸದರಿ ಜಾಹೀರಾತಿಗೆ ಉತ್ತರವಾಗಿ ಬಂದ ಏಕೈಕ ಟೆಂಡರ್ ಅತ್ಯಲ್ಪ ಮೊತ್ತವಾದುದರಿಂದ ತಿರಸ್ಕರಿಸಲ್ಪಟ್ಟಿತು. ಆದಾಗ್ಯೂ ಕೆ.ರಾ. ಸರ್ಕಾರಿ ನೌಕರರ ಸಂಘವು ಇದನ್ನು ಖರೀದಿಸಲು ಮುಂದೆ ಬಂದಿದ್ದು ಸದರಿ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.